‘ಹಾಗಾದರೆ ನಮ್ಮ ಮನೆ ಸಾಸಿವೆ ಆಗಲಿಕ್ಕಿಲ್ಲ’ ಎಂದು ಒಳಹೋದಳು.

ಇನ್ನೊಂದು ಮನೆಗೆ ಓಡಿದೆ. ಮನೆ ಮುಂದೆ ವೃದ್ಧರೊಬ್ಬರು ಕುಳಿತಿದ್ದರು. ಕೇಳಿದೆ, ‘ತಾತ, ನಿಮ್ಮ ಮನೆಯಲ್ಲಿ ಯಾರೂ ಸತ್ತಿಲ್ಲ ತಾನೇ?’ ಎಂದು. ಅವರಿಗೆ ಅನುಮಾನವಾಗಿ, ‘ಯಾಕಮ್ಮ ಹೀಗೆ ಕೇಳುತ್ತಿದ್ದೀಯಾ?’ ಎಂದರು. ಬುದ್ಧರು ಸತ್ತಿರುವ ನನ್ನ ಹಸುಗೂಸನ್ನು ಬದುಕಿಸಲು ಸಾವು ಇರದ ಮನೆಯಿಂದ ಹಿಡಿ ಸಾಸಿವೆಯನ್ನು ತರಲು ಹೇಳಿದ್ದಾರೆ’ ಎಂದೆ. ‘ಸಾಸಿವೆಯನ್ನು ಹಿಡಿಯಲ್ಲೇನು, ಬೊಗಸೆ ತುಂಬಾ ಕೊಡುವೆ. ಆದರೆ ಆರು ತಿಂಗಳ ಹಿಂದೆ ನನ್ನ ಮೂವತ್ತು ವರ್ಷದ ಮಗ ತೀರಿಹೋದ’ ಎಂದು ಅಳತೊಡಗಿದವರು, ‘ದುಡಿದು ಹಾಕಲು ಇದ್ದವನು ಅವನೊಬ್ಬನೇ ಮಗ. ಅವನು ಹೋದ ಮೇಲೆ ನಾವಿಬ್ಬರೂ ಅನಾಥರಾಗಿದ್ದೇವೆ. ಕೂಳು ಹಾಕಲೂ ಯಾರೂ ಇಲ್ಲ ತಾಯಿ. ನಾವು ಸಾಯುವವರೆಗಾದರೂ ಬದುಕಿರಬೇಕಲ್ಲ ಎಂದು ಸಾವಿನ ನಿರೀಕ್ಷೆಯಲ್ಲಿ ಉಸಿರು ಬಿಗಿಹಿಡಿದು ಬದುಕುತ್ತಿದ್ದೇವೆ’ ಎಂದುಬಿಟ್ಟರು. ಎರಡು ಮನೆಯವರ ಮಾತು ಕೇಳಿ ನಿರಾಸೆಯ ಕಾರ್ಮೋಡ ಆವರಿಸಿತು.

ಮೂರನೇ ಮನೆಗೆ ಹೋದೆ. ಸಾಸಿವೆ ಕೇಳುವ ಮೊದಲು, ಸಾವು ಇರದ ಮನೆಯೇ ಇದು ಎಂದು ಮೊದಲು ಕೇಳಲಾರಂಭಿಸಿದೆ. ಎಲ್ಲರೂ ಮೊದಮೊದಲು ಅನುಮಾನದಿಂದ ನೋಡಲಾರಂಭಿಸಿದರು. ಆದರೆ ಎಲ್ಲರಿಗೂ ಉತ್ತರಿಸಿ ಕಾರಣ ಹೇಳುವಷ್ಟು ವ್ಯವಧಾನ ನನ್ನಲ್ಲಿ ಉಳಿದಿರಲಿಲ್ಲ. ಹೀಗೆ ಹದಿನೈದಿಪ್ಪತ್ತು ಮನೆಗಳನ್ನು ಅಲೆದೆ. ಅಜ್ಜಿ, ತಾತ, ಅಪ್ಪ, ಅಮ್ಮ, ಮಗ, ಮಗಳು, ಸೊಸೆ, ಅಳಿಯ, ಮೊಮ್ಮಕ್ಕಳು ಹೀಗೆ ಒಬ್ಬರಲ್ಲ ಒಬ್ಬರು ಪ್ರತಿಯೊಂದು ಮನೆಯಲ್ಲೂ ಸತ್ತೇ ಇರುತ್ತಿದ್ದರು. ಇನ್ನೂ ಇತರೆ ಮನೆಗಳನ್ನು ಎಡತಾಕುವುದು ವ್ಯರ್ಥ ಎನ್ನಿಸಲಾರಂಭಿಸಿತು. ಬುದ್ಧರು, ಎಲ್ಲರ ಮನೆಯಲ್ಲೂ ಒಂದಲ್ಲಾ ಒಂದು ಸಾವು ಸಂಭವಿಸಿಯೇ ಇರುತ್ತದೆ ಎಂದೇ ಹೀಗೆ ಹೇಳಿದ್ದಾರೆ ಅನ್ನಿಸಲಾರಂಭಿಸಿತು. ಅಷ್ಟಕ್ಕೂ ಸಾಸಿವೆಯನ್ನೇ ಯಾಕೆ ತರಲು ಹೇಳಿದರು ಎಂಬುದು ಮಾತ್ರ ನನಗೆ ಅರ್ಥವಾಗಲಿಲ್ಲ.

ಸೋತ ಕಾಲುಗಳನ್ನು ಎಳೆಯುತ್ತಾ, ನನ್ನ ಮಗುವನ್ನು ಕಾಯುತ್ತಾ ಕುಳಿತಿದ್ದ ಬುದ್ಧರ ಬಳಿಗೆ ಬಂದೆ. ‘ಸಾಸಿವೆ ಸಿಕ್ಕಿತೇ?’ ಎಂದು ಬೋಗುಣಿಯನ್ನು ಬಗ್ಗಿ ನೋಡಿದರು. ‘ಇಲ್ಲ, ಈ ಊರಿನ ಎಲ್ಲರ ಮನೆಯಲ್ಲೂ ಒಬ್ಬರಲ್ಲ ಒಬ್ಬರು ಸತ್ತೇ ಇದ್ದಾರೆ. ನೀವು ಇನ್ನಷ್ಟು ಕಾಲಾವಕಾಶ ನೀಡಿದರೆ ಪಕ್ಕದ ಹಳ್ಳಿಗೆ ಹೋಗಿ ಬೇಡಿ ತರುವೆ’ ಎಂದೆ. ಮುಗುಳ್ನಕ್ಕರು. ಆ ನಗುವಿನಲ್ಲಿ ಅಯ್ಯೋ ಮರುಳೇ ಎಂಬ ಭಾವವಿತ್ತು. ‘ಪ್ರಯೋಜನವಿಲ್ಲ ತಾಯಿ. ಸಾವಿಲ್ಲದೆ ನಾವಿಲ್ಲ. ಇಂದು ನಿನ್ನ ಮಗು, ನಾಳೆ ನಾನು, ನಾಡಿದ್ದು ನೀನು... ಹೀಗೆ ಎಲ್ಲರೂ ಸಾಯಲೇಬೇಕು. ನಮ್ಮ ಹಿಂದೆಯೂ ಕೋಟ್ಯಂತರ ಜೀವರಾಶಿ ಸತ್ತುಹೋಗಿದೆ. ಅವರೆಲ್ಲ ಜನರೂ, ಪ್ರಾಣಿಗಳೂ ಬದುಕಿದ್ದಿದ್ದರೆ ಈ ಭೂಮಿ ಮೇಲೆ ನಮಗೆ ಕಾಲಿಡಲೂ ಜಾಗವಿರುತ್ತಿರಲಿಲ್ಲ. ಹಿಂದೆ ಶತಕೋಟಿ ರಾಜರುಗಳಾಳಿದ ನೆಲವನ್ನು ತನ್ನದು ಎಂದೆನುತ ಶಾಸನವನ್ನು ಬರೆಸಿ ಮೆರೆಯುತ್ತೇವೆ. ಆದರೆ ಇಲ್ಲಿ ಯಾವುದೂ ಶಾಶ್ವತವಲ್ಲ. ನಿರಂತರ ಬದಲಾವಣೆಯೊಂದೇ ಶಾಶ್ವತ...’ ಎಂದು ನಕ್ಕರು.

ನಾನು ಶಿರಬಾಗಿದೆ. ಅವರ ಕಾಲ ಬಳಿ ಇದ್ದ ಸತ್ತ ನನ್ನ ಮಗುವನ್ನು ಜೀವಕಾರುಣ್ಯದಿಂದ ಹಿಡಿದೆತ್ತಿ, ‘ಯಾವಾಗ ನಾವು ಯಾವುದೇ ವ್ಯಕ್ತಿ, ವಸ್ತುವಿನ ಬಗ್ಗೆ ವ್ಯಾಮೋಹ ಹೊಂದಿರುತ್ತೇವೋ ಅದು ಅಗಲಿದಾಗ ಸ್ವಾಭಾವಿಕವಾಗಿ ಅದು ನಮ್ಮ ದುಃಖಕ್ಕೆ ಕಾರಣವಾಗುತ್ತದೆ’ ಎಂದರು.

‘ನನ್ನ ತಾಯಿ ನನ್ನನ್ನು ಅಗಲಿದಾಗ ನಾನು ಕೇವಲ ಏಳು ದಿನದ ಮಗುವಾಗಿದ್ದೆ...’ ಎಂದವರು, ‘ನನ್ನ ಮಗ ರಾಹುಲನನ್ನು ನಾನು ತೊರೆದು ಬಂದಾಗ ಅವನೂ ಇದೇ ವಯಸ್ಸಿನ ಕಂದನಾಗಿದ್ದ’ ಎಂದು ಕೈನೀಡಿ ಮಗುವನ್ನು ನನ್ನತ್ತ ಚಾಚಿದರು. ನಾನು ಆತು ಹಿಡಿದುಕೊಂಡು, ಇನ್ನು ನನ್ನ ಮಗನ ಉಸಿರು ಹಿಂದಿರುಗಲಾರದೆಂಬ ಖಚಿತತೆಯ ಮೇಲೆ ಸಂಸ್ಕಾರ ಮಾಡುವುದೊಂದೇ ಉಳಿದಿರುವ ಮಾರ್ಗ ಎಂದರಿತು ಸ್ತಬ್ಧಳಾಗಿ ನಿಂತೆ.

ಬುದ್ಧರು ಯಾವುದನ್ನು ಅಂಟಿದರೂ ಅಂಟಿಸಿಕೊಳ್ಳದಂತೆ ‘ಬುದ್ಧಂ... ಶರಣಂ...’ ಎನ್ನುತ್ತಾ ಹೊರಟು ನಿಂತರು. ಆವರೆಗೆ ಚದುರಿ ನಿಂತಿದ್ದ ಅವರ ಅನುಯಾಯಿಗಳು ಅವರನ್ನು ಅನುಸರಿಸಲಾರಂಭಿಸಿದರು. ನಾನು, ‘ಬುದ್ಧರೇ...’ ಎಂದು ಕೂಗಿದೆ. ಅವರು ನಿಂತು ಹಿಂದಿರುಗಿ ನೋಡಿದರು – ಇನ್ನೂ ಏನು ಅಹವಾಲಿರಬಹುದೆಂದು. ಅಷ್ಟಾದರೂ ಅವರ ಮುಖದಲ್ಲಿ ಮಂದಹಾಸವೆನ್ನುವುದು ಮಿನುಗುತ್ತಿತ್ತು.

‘ತಾವು ಸ್ವಲ್ಪ ತಡೆದರೆ ಈ ಮಗುವಿನ ಸಂಸ್ಕಾರ ನೆರವೇರಿಸಿ ನಾನೂ ನಿಮ್ಮೊಂದಿಗೆ ಬರುವೆ’ ಎಂದೆ.

‘ಅವಶ್ಯವಾಗಿ’ ಎಂದು ಮುಗುಳ್ನಕ್ಕರು.

### ಅಮ್ರಪಾಲಿ

ನನ್ನ ಸೌಂದರ್ಯದ ಲಹರಿ ರಾಜಧಾನಿ ವೈಶಾಲಿಯನ್ನು ದಾಟಿ ಲಿಚ್ಛವಿಯ ತುಂಬಾ ಹರಡಿತ್ತು. ನನಗಿನ್ನೂ ಆಗ ಹನ್ನೆರಡರ ಪ್ರಾಯ. ಆಗಲೇ ನನ್ನ ಪ್ರಾಯಕ್ಕಿಂತ ಮೇಲ್ಪಟ್ಟ ಎಲ್ಲರೂ ನನ್ನ ಸೌಂದರ್ಯಕ್ಕೆ ಮಾರುಹೋದವರೇ. ಯಾರು ಹೆತ್ತ ಮಗಳೋ ಎಂದು ಊರ ಗಂಡಸರೆಲ್ಲ ನನ್ನನ್ನು ಮದುವೆಯಾಗಲು ತುದಿಗಾಲ ಮೇಲೆ ನಿಂತಿದ್ದರಂತೆ. ಅವರವರಲ್ಲೇ ಪೈಪೋಟಿ, ಪರಸ್ಪರರಲ್ಲಿ ಹೊಡೆದಾಟವಂತೆ – ನನಗೆ ಬೇಕು, ನನಗೆ ಬೇಕು ಎಂದು. ಇದಾವ ವಿಷಯವೂ ನನ್ನವರೆಗೆ ಬಂದಿರಲಿಲ್ಲ. ಊರ ಹಿರಿಯರೆಲ್ಲ ಸೇರಿ – ಆಕೆ ಯಾರಿಗೂ ಬೇಡ, ಆದರೆ ಎಲ್ಲರಿಗೂ ಇರಲಿ, ಇಲ್ಲದಿದ್ದರೆ ಊರ ಗಂಡಸರೆಲ್ಲ ತಮ್ಮ ತಮ್ಮಲ್ಲೇ ಬಡಿದಾಡಿಕೊಂಡು ಸಾಯುವರು ಎಂದು

## ಕಳೆದ ಸಂಚಿಕೆಯಲ್ಲಿ



ಜ್ಞಾನದ ಹುಡುಕಾಟದಲ್ಲಿ ಗೌತಮ ಗಯೆಯನ್ನು ತಲುಪಿದ. ಅಲ್ಲಿನ ವಿಶಾಲ ಬೋಧಿವೃಕ್ಷ ಅವನಿಗೆ ಆಶಾಕಿರಣದಂತೆ ಕಾಣಿಸಿತು. ವೈಶಾಖ ಶುದ್ಧ ಪೂರ್ಣಿಮೆಯ ದಿನ ಚಂದ್ರನ ಕರುಣೆಯ ಬೆಳುದಿಂಗಳು ಹೊಳೆಯಾಗುತ್ತಿದ್ದಾಗ ಅರಿವಿನ ಬೆಳಕು ಗೌತಮನಿಗೆ ಗೋಚರಿಸಿತು. ತನಗೆ ಜ್ಞಾನೋದಯವಾಯಿತು ಎಂದು ಸಿದ್ಧಾರ್ಥನಿಗೆ ಮನದಟ್ಟಾಯಿತು. ಅದನ್ನು ಖಚಿತಪಡಿಸಿಕೊಳ್ಳಲು ಈ ಮೊದಲು ತನ್ನ ಅನುಯಾಯಿಗಳಾಗಿದ್ದವರ ಬಳಿಗೆ ಹೋದ. ಅವರು ಬುದ್ಧನಿಗೆ, ಬುದ್ಧಮಾರ್ಗಕ್ಕೆ ಶರಣುಹೋದರು. ಬುದ್ಧಮಾರ್ಗ ಆಂದೋಲನದ ರೂಪ ಪಡೆಯತೊಡಗಿತು. ಇಷ್ಟಾದರೂ, ದೇವದತ್ತನಿಗೆ ಗೌತಮನ ಮೇಲಿನ ಹಗೆ ತೀರಿರಲಿಲ್ಲ. ಬುದ್ಧನನ್ನು ಕೊಲ್ಲಿಸಲು ಪ್ರಯತ್ನಿಸಿ ವಿಫಲನಾದ. ಜ್ಞಾನೋದಯದ ನಂತರ ಅರಮನೆಗೆ ಬರುತ್ತೇನೆಂದು ಹೇಳಿದ್ದ ಗೌತಮ, ಶುದ್ಧೋದನನ ಕರೆಯ ಮೇರೆಗೆ ಕಪಿಲವಸ್ತುವಿಗೆ ಬಂದ. ರಾಜ್ಯದ ತುಂಬ ಸಂಭ್ರಮ. ಆದರೆ, ಶುದ್ಧೋದನ, ಗೌತಮಿ, ಯಶೋಧರೆ, ರಾಹುಲರ ಮನಸ್ಸಿನಲ್ಲಿದ್ದುದೇ ಬೇರೆ. ಬೆಳುದಿಂಗಳು ಮೂರ್ತರೂಪದಲ್ಲಿ ಎದುರಿಗೆ ನಿಂತಿದ್ದರೂ ಅದನ್ನು ತಮ್ಮದಾಗಿಸಿಕೊಳ್ಳದ ಅಸಹಾಯಕತೆ ಅವರದು.